ದಿನಾಂಕಃ 09.06.2023 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಮುಂದುವರಿದ ಪಾಟೀ ಸವಾಲು 1, 4 ರಿಂದ 6ನೇ ಪ್ರತಿವಾದಿ ಪರ ವಕೀಲರಿಂದ ಃ**

ನನ್ನ ತಾಯಿ ಜಯಮ್ಮ ಎಂದರೆ ಹೌದು. ನನ್ನ ತಾಯಿಯ ತಂದೆಯ ಹೆಸರು ಮುನಿಶಾಮಪ್ಪ. ನಾನು ಮುನಿಶಾಮಪ್ಪರವರನ್ನು ನೋಡಿರುತ್ತೇನೆ. ನನ್ನ ತಾಯಿಯ ತಾಯಿ ಬೈಯಮ್ಮ. ನಾನು ಬೈಯಮ್ಮನನ್ನು ನೋಡಿರುವುದಿಲ್ಲ. ನನ್ನ ತಾಯಿಯ ತವರು ಮನೆ ಬೆಂಗಳೂರಿನ ಕೆ. ಆರ್. ಪುರಂನ ಕಲ್ಕೆರೆ ಎಂದರೆ ಹೌದು. ನನ್ನ ತಾತ ಮುನಿಶಾಮಪ್ಪ ಕಲ್ಕೆರೆಗೆ ಸ್ವಲ್ಪ ದಿನ ವ್ಯವಹಾರ ನೋಡಿಕೊಳ್ಳಲು ಹೋಗುತ್ತಿದ್ದರು ಮತ್ತು ಬರುತ್ತಿದ್ದರು. ಸದರಿ ಮುನಿಶಾಮಪ್ಪ ಸಂತೇಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದ ಬಗ್ಗೆ ಪಡಿತರ ಚೀಟಿ, ಮತದಾರರ ಪಟ್ಟಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳು 30 ವರುಷಗಳ ಹಿಂದೆ ಇತ್ತೊ ಇಲ್ಲವೋ ಗೊತ್ತಿಲ್ಲ ಹಾಗೂ ಸದರಿ ದಾಖಲಾತಿಗಳು ನನ್ನ ತಾತನ ಬಳಿ ಇತ್ತೊ ಇಲ್ಲವೋ ಎಂದು ಗೊತ್ತಿಲ್ಲ. ಸದರಿ ಮುನಿಶಾಮಪ್ಪನ ಅಣ್ಣನ ಹೆಸರು ಪೂಜಪ್ಪ ಎಂದರೆ ಹೌದು. ಪೂಜಪ್ಪನ ಹೆಂಡತಿಯ ಹೆಸರು ಗಂಗಮ್ಮ. ಪೂಜಪ್ಪ ದಿಃ 19.01.1970ರಂದು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಮುನಿಶಾಮಪ್ಪ ದಿಃ 13.08.1987ರಂದು ಮೃತಪಟ್ಟಿರುತ್ತಾರೆ ಎಂದರೆ ಹೌದು. ನನ್ನ ತಾತ ಮುನಿಶಾಮಪ್ಪ ಕಲ್ಕೆರೆಯಲ್ಲಿ ಮೃತಪಟ್ಟಿದ್ದು, ನಂತರ ಆತನನ್ನು ಸಂತೇಹಳ್ಳಿಯಲ್ಲಿ ಮಣ್ಣು ಮಾಡಲಾಯಿತು ಎಂದರೆ ಸರಿಯಲ್ಲ. ನನ್ನ ತಾತ ಮುನಿಶಾಮಪ್ಪನಿಗೆ ಗಂಡು ಸಂತತಿ ಇರಲಿಲ್ಲ, ಹೆಣ್ಣು ಮಕ್ಕಳು ಮಾತ್ರ

ಇದ್ದರು ಎಂದರೆ ಹೌದು. ನನ್ನ ತಾಯಿಯ ಅಕ್ಕ ಮುನಿವೆಂಕಟಮ್ಮನನ್ನು ಜಿ. ಎಸ್. ವೆಂಕಟಸ್ವಾಮಿ ಅವರಿಗೆ ಮದುವೆ ಮಾಡಲಾಗಿದೆ ಎಂದರೆ ಹೌದು. ಸದರಿ ಮುನಿವೆಂಕಟಮ್ಮನಿಗೆ 3 ಜನ ಹೆಣ್ಣು ಮಕ್ಕಳು-ಅವರೆಂದರೆ ಲಕ್ಷಮ್ಮ, ಸರಸ್ವತಮ್ಮ ಮತ್ತು ಶಾರದಮ್ಮ ಎಂದರೆ ಹೌದು. ನನ್ನ ತಾಯಿಯ ಇನ್ನೊಬ್ಬ ಅಕ್ಕ ಜಯಮ್ಮ, ಕೆ. ಹೊಸೂರು ಶಿಡ್ಲಘಟ್ಟ ತಾಲ್ಲೂಕಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ನನ್ನ ತಾಯಿಯ ತಂಗಿ ರತ್ನಮ್ಮಳನ್ನು ಚೀಮಂಗಳದ ಪಿಳ್ಳರಾಮಪ್ಪರವರಿಗೆ ಮದುವೆ ಮಾಡಲಾಗಿದೆ ಎಂದರೆ ಸರಿ. ನನ್ನ ತಾಯಿಯನ್ನು ಸಂತೇಹಳ್ಳಿ ಗ್ರಾಮದ ಕೃಷ್ಣಪ್ಪನಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. 4 ಜನ ಹೆಣ್ಣು ಮಕ್ಕಳಿಗೆ ನನ್ನ ತಾಯಿಯ ತಂದೆ ತಾಯಿಯೇ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಇಬ್ಬರು ತಾತಂದಿರು ಪೂಜಪ್ಪ ಮತ್ತು ಮುನಿಶಾಮಪ್ಪ ಮದುವೆಯನ್ನು ಮಾಡಿರುತ್ತಾರೆ. ನನ್ನ ತಾಯಿಯ ದೊಡ್ಡಪ್ಪ ಮತ್ತು ವಾದಿಯ ತಂದೆ-ಮುನಿಶಾಮಪ್ಪ ಬಾಯಿ ಮಾತಿನ ಮೂಲಕ 1939ರಲ್ಲಿ ವಿಭಾಗ ಆಗಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.